ಹೊಸಡೇಟು ಕೈಕೊಂಡವನು. ಒಂದೆರಡು ಸರ್ತಿ ನನ್ನ ಕೇಸಿನಲ್ಲಿ ವಕಾಲತ್ತು ಮಾಡಿದ ಹೆಣ್ಣು–ಲಾಯರೇ ನನ್ನೊಡನೆ ಸರಸಕ್ಕಿಳಿದಿದ್ದೂ ಇದೆ... ಇರಲಿ. ಇವೇನೇ ಇದ್ದರೂ, ಡಿವೋರ್ಸು ಡಿವೋರ್ಸೇ ತಾನೇ? ಅಂದಮೇಲೆ, ಅದರೊಡನಿರುವ ನೋವಿಗೆ ಅರೆಯೇ? ಅದು ಅನಾಮತ್ತನೆ ತಂದೆಸಗುವ ಮನೋಘಾಸಿ ಕಡಿಮೆಯೇ? ಹೆಣ್ಣೊಂದರಲ್ಲಿ ಮೈತೊಡಗಿಸುವಷ್ಟೇ ಮನಸೂ ಹೂಡಿದ ಮೇಲೆ, ಮೈಹಿಂತೆಗೆದುಕೊಂಡಷ್ಟೇ ಸರಕ್ಕನೆ ಮನಸನ್ನು ವಾಪಸೆಳೆಯಲಾದೀತೇ? ಅಂಟಿಕೊಂಡ ಮೇಲೆ ಅಂಟಿದ್ದೇ ಸುಳ್ಳೆನ್ನುವ ಹಾಗೆ ಬಿಟ್ಟಿದ್ದು ಬಿಟ್ಟು ಎದ್ದುಹೊರಡಲಾದೀತೆ? ಇನ್ನು, ಬೇರ್ಪಡುವುದೆಂದರೆ ಪಾಲಾಗುವ ಲೆಕ್ಕವೂ ಉಂಟಷ್ಟೆ? ಯಾರಿಗೇನು ಸೇರತಕ್ಕದು, ಯಾರಲ್ಲೇನು ಮಿಗತಕ್ಕದು – ಎಂಬ ಸಾಮಾನ್ಯ ಲೇವಾದೇವಿಯಲ್ಲದೆ ಯಾರು ಸರಿ, ಯಾರು ತಪ್ಪು, ಯಾರು ಹೆಚ್ಚು ಸರಿ, ಯಾರು ಕಡಿಮೆ ತಪ್ಪು... ಅಂತೆಲ್ಲ ದಾವೆಗಳುಂಟಷ್ಟೇ?

